**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.264/2019**

**(ಚಾ.ಸಾ.5/ಪ್ರಾ.ಸಾ.5)**

ತಾ:28-09-2022 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಶೇಖರ್ |
| ತಂದೆಯ ಹೆಸರು | ಪೆರಿಯಸ್ವಾಮಿ |
| ವಯಸ್ಸು | 45 ವರ್ಷ |
| ಉದ್ಯೋಗ | ಗಾರೆ ಕೆಲಸ |
| ವಾಸ ಸ್ಥಳ | ವಿನಾಯಕ ಲೇಔಟ್, ಬೆಂಗಳೂರು |

**ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ:**

1. ನನಗೆ ಚಾಸಾ.2 ವನಜಾಕ್ಷಮ್ಮ ನವರ ಪರಿಚಯ ಇರುತ್ತದೆ. ಚಾಸಾ.2 ರವರ ಮನೆ ನಮ್ಮ ಮನೆಯಿಂದ 50 ಅಡಿ ದೂರದಲ್ಲಿ ಇರುತ್ತದೆ. ಚಾಸಾ.1 ರವರ ಪರಿಚಯ ಇದ್ದು, ಚಾಸಾ.6 ರವರು ನನ್ನ ಹೆಂಡತಿ ಆಗಿದ್ದು, ಚಾಸಾ.7 ಲತ ಇವರು ಚಾಸಾ.1 ರವರ ಹೆಂಡತಿ ಆಗಿರುತ್ತಾರೆ. ಸುಮಾರು 4 ವರ್ಷದ ಹಿಂದೆ ಮಧ್ಯಾಹ್ನ 03:00 ಗಂಟೆ ಸಮಯದಲ್ಲಿ ಚಾಸಾ.2 ರವರ ಮನೆಯ ಬಳಿ ಜನರು ಸೇರಿಕೊಂಡಿದ್ದು, ಮೊದಲಿಗೆ ಚಾಸಾ.1 ಹಾಗೂ 7 ರವರು ಸದರಿ ಸ್ಥಳಕ್ಕೆ ಹೋಗಿದ್ದು, ನಂತರ ನಾನು ಹಾಗೂ ಚಾಸಾ.6 ರವರು ಸದರಿ ಸ್ಥಳಕ್ಕೆ ಹೋಗಿರುತ್ತೇವೆ. ಸ್ಥಳದಲ್ಲಿ ನೋಡಿದಾಗ ಚಾಸಾ.2 ರವರು ಅವರ

ಮನೆಯ ಗೇಟಿನ ಬಳಿ ಕುಳಿತಿದ್ದು, ಅವರ ಕುತ್ತಿಗೆಯ ಬಳಿ ರಕ್ತಸ್ರಾವ ಆಗುತ್ತಿತ್ತು. ನಂತರ ಚಾಸಾ.2 ರವರನ್ನು ಚಾಸಾ.1 ರವರು ಅವರ ಕಾರಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಅವರ ಜೊತೆ ನಾನು, ಚಾಸಾ.6 ಮತ್ತು 7 ರವರು ಹೋಗಿದ್ದೆವು. ಆ ದಿನ ಚಾಸಾ.2 ರವರನ್ನು S.K.Health Care Hospital ಗೆ ಕರೆದುಕೊಂಡು ಹೋಗಿ ಆಸ್ಪತ್ರೆಗೆ ದಾಖಲಿಸಿ ನಾವು ವಾಪಸ್ ಬಂದಿರುತ್ತೇವೆ. ಚಾಸಾ.2 ರವರ ಕುತ್ತಿಗೆಯಿಂದ ಚೈನ್ ಕಿತ್ತುಕೊಳ್ಳುವಾಗ ಒಂದು ಚಾಕುವಿನಿಂದ ಅವರ ಕುತ್ತಿಗೆಗೆ ಕುಯ್ದು ಕಾರಣ ಅವರಿಗೆ ಗಾಯ ಆಗಿತ್ತು. ನಾನು ಪೋಲೀಸರ ಮುಂದೆ ಪ್ರಕರಣಕ್ಕೆ ಸಂಭಂದಿಸಿದಂತೆ ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿಪರ ವಕೀಲರಿಂದಃ</u>

ಆರೋಪಿಪರ ವಕೀಲರು ಗೈರು ಹಾಜರಿದ್ದು, ಆರೋಪಿ ತನ್ನ ಪರ ವಕೀಲರು ನ್ಯಾಯಾಲಯಕ್ಕೆ ಹಾಜರಾಗಿ ಪಾಟೀ ಸವಾಲು ಮಾಡುವುದಾಗಿ ಹೇಳಿ ಪ್ರಕರಣ ಇಟ್ಟಿಕೊಳ್ಳುವಂತೆ ಕೋರಿದ್ದು, ನಂತರ ಕೂಗಿಸುವುದು.

ಪುನಃ ಪ್ರಕರಣವನ್ನು ಮಧ್ಯಾಹ್ನ 12ಃ45 ರಲ್ಲಿ ಕೂಗಿಸಿದ್ದು, ಆರೋಪಿಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲಿಗೆ ಮಧ್ಯಾಹ್ನ 01ಃ00 ಗಂಟೆಗೆ ಕೂಗಿಸುವುದು.

ಪುನಃ ಪ್ರಕರಣವನ್ನು ಮಧ್ಯಾಹ್ನ 01ಃ45 ರಲ್ಲಿ ಕೂಗಿಸಿದ್ದು, ಆರೋಪಿ ಪರ ಶ್ರೀ.ಎ.ಆರ್.ವಕೀಲರು ಹಾಜರಿದ್ದು, ಪಾಟೀ ಸವಾಲು ಮಾಡಿರುತ್ತಾರೆ.

1. ನನಗೆ ಕನ್ನಡ ಭಾಷೆ ಓದಲು ಬರೆಯಲು ಬರುವುದಿಲ್ಲ. ಆ ದಿನ ಘಟನೆ ಆಗಿರುತ್ತದೆ ಎಂದು ಹೇಳಿದ ದಿನ ನಾನು ಚಾಸಾ.2 ರವರ ಮನೆಯ ಪಕ್ಕದಲ್ಲಿರುವ ನಮ್ಮ

ಮನೆಯಲ್ಲಿ ಇದ್ದೆನು. ನಾನು ಗಾರೆ ಕೆಲಸ ಮಾಡುತ್ತೇನೆ. ಗಾರೆ ಕೆಲಸಕ್ಕೆ ನಾನು ಪ್ರತೀ ದಿನ ಬೆಳಗ್ಗೆ 08:30 ಕ್ಕೆ ಹೋಗಿ ಸಂಜೆ 06:00 ಗಂಟೆಗೆ ಬರುತ್ತೇನೆ. ಆರೋಪಿ ಸ್ವತಃ ಆ ದಿನ ಕೆಲಸಕ್ಕೆ ಹೋಗಿರಲಿಲ್ಲ ಎಂದು ನುಡಿದಿರುತ್ತಾರೆ. ಚಾಸಾ.2 ರವರಿಗೆ ಗಾಯ ಆದ ದಿನ ನಾನು ಮನೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಚಾಸಾ.2 ರವರಿಗೆ ಯಾರು ಗಾಯ ಮಾಡಿರುತ್ತಾರೆ ಹಾಗೂ ಯಾವ ಆಯುಧದಿಂದ ಗಾಯ ಮಾಡಿರುತ್ತಾರೆಂದು ನಾನು ನೋಡಿರುವುದಿಲ್ಲ. ನಾನು ಘಟನೆ ಆಗಿರುತ್ತದೆ ಎಂದು ಹೇಳಿದ ನಂತರ ಯಾವುದೇ ಸಮಯದಲ್ಲಿ ಪೋಲೀಸ್ ಠಾಣೆಗೆ ಹೋಗಿಲ್ಲ. ಪೋಲೀಸರು ಪ್ರಕರಣಕ್ಕೆ ಸಂಭಂದಿಸಿದಂತೆ ನನ್ನ ಹೇಳಿಕೆ ಪಡೆದಿಲ್ಲ ಎಂದರೆ ಸರಿ.

**ಮರುವಿಚಾರಣೆಃಇಲ್ಲ**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ಎಸ್.ಶ್ರೀಧರ)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.